# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1937 |
| ಸದಸ್ಯರ ಹೆಸರು | ಶ್ರೀ ಪ್ರಕಾಶ್ ಕೆ ರಾಥೋಡ್ |
| ಉತ್ತರಿಸುವ ದಿನಾಂಕ | 16-03-2022 |
| ಉತ್ತರಿಸುವವರು | ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | 'ದೈವ ಸಂಕಲ್ಪ' ಯೋಜನೆಯಡಿ ರಾಜ್ಯದ ಯಾವ ಯಾವ 25 ದೇವಾಲಯಗಳನ್ನು ಅಭಿವೃದ್ಧಿ ಪಡಿಸಲು ಆಯ್ಕೆ ಮಾಡಲಾಗಿದೆ | ಧಾರ್ಮಿಕ ದತ್ತಿ ಇಲಾಖೆಯಡಿ 'ದೈವ ಸಂಕಲ್ಪ' ಯೋಜನೆಯಡಿ ರಾಜ್ಯದ 25 ದೇವಾಲಯಗಳನ್ನು ಅಭಿವೃದ್ಧಿಪಡಿಸಲು ಆಯ್ಕೆ ಮಾಡಲಾಗಿದೆ ದೇವಾಲಯಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಆಯ್ಕೆ ಮಾಡಿದ್ದಲ್ಲಿ, ಈ ಯೋಜನೆಯಡಿ ಯಾವ ಯಾವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. (ಪೂರ್ಣ ವಿವರ ನೀಡುವುದು) | ಧಾರ್ಮಿಕ ದತ್ತಿ ಇಲಾಖೆಯಡಿ ದೈವ ಸಂಕಲ್ಪ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಪ್ರಥಮ ಹಂತವಾಗಿ ಗ್ರೂಪ್ 'ಎ' ಶ್ರೇಣಿಯ 25 ದೇವಾಲಯಗಳನ್ನು ಗುರುತಿಸಿ ಆಯಾಯ ದೇವಾಲಯಗಳಿಂದ ಬರುವ ಆದಾಯದಿಂದ ದೇವಾಲಯಗಳಲ್ಲಿ ಯೋಜಿತ ಅಭಿವೃದ್ಧಿ ಕಾರ್ಯಗಳನ್ನು ಹಂತ ಹಂತವಾಗಿ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಕಂಇ 107 ಮುಅಬಿ 2022 ದಿನಾಂಕ: 22.02.2022ರಲ್ಲಿ ದೈವ ಸಂಕಲ್ಪ ಯೋಜನೆಯನ್ನು ಹಮ್ಮಿಕೊಂಡಿದೆ. ಯೋಜನೆಯ ಅಂಶಗಳು ಕೆಳಕಂಡಂತಿದೆ.<br>1. ಯೋಜನೆಯ ಗುರಿ.<br>2. ಯೋಜನೆಯ ತಂತ್ರ<br>3. ದೇವಾಲಯಗಳ ಅಭಿವೃದ್ಧಿ<br>(ಹಂತ -1 ಮಾಸ್ಟರ್ ಪ್ಲಾನ್‌ಗಳ ತಯಾರಿ, ಮಾಸ್ಟರ್ ಪ್ಲಾನ್‌ಗಳ ತಯಾರಿಗಾಗಿ ಮಾರ್ಗಸೂಚಿ. ಅಳವಡಿಸಲಾದ ಮಾಸ್ಟರ್ ಪ್ಲಾನ್ ಹಾಗೂ ವಿನ್ಯಾಸದ ರೂಪ ರೇಖೆಗಳ ವಿವರ)<br>ಹಂತ-2 ಅಂದಾಜು ಪಟ್ಟಿ ತಯಾರಿಕೆ.<br>ಹಂತ-3 ಕಾಮಗಾರಿಯ ಕಾರ್ಯ ರೂಪ<br>ಹಂತ-4 ಅನುಮೋದನೆ ಮತ್ತು ಅನುಷ್ಠಾನ |
| ಇ) | ಯಾವ ಕಾಲಮಿತಿಯೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು? (ಯೋಜನೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು) | ದೈವ ಸಂಕಲ್ಪ ಯೋಜನೆ ಅನುಷ್ಠಾನದ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ ಕಂಇ 107 ಮುಅಬಿ 2022 ದಿನಾಂಕ. 22.02.2022ರಲ್ಲಿ ಆದೇಶ ಹೊರಡಿಸಿದ್ದು, ಸದರಿ ಆದೇಶದನ್ವಯ ಪ್ರಾರಂಭಿಕವಾಗಿ 25 ದೇವಾಲಯಗಳನ್ನು ಗುರುತಿಸಿ ಉದ್ದೇಶಿತ ಯೋಜನೆಯನ್ನು ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ. ಸದರಿ ಆದೇಶದನ್ವಯ ದೇವಾಲಯಗಳ 10ವರ್ಷಗಳ ಕ್ರಿಯಾ ಯೋಜನೆ ತಯಾರಿಸಿ ಅಲ್ಪಾವಧಿ (1 ರಿಂದ 3 ವರ್ಷಗಳು) ಮಧ್ಯಾವಧಿ (4 ರಿಂದ 7 ವರ್ಷಗಳು) ಮತ್ತು ಧೀರ್ಘಾವಧಿ (8 ರಿಂದ 10 ವರ್ಷಗಳು) ಕ್ರಿಯಾ ಯೋಜನೆಗಳನ್ನು ಅಭಿವೃದ್ಧಿ ಪಡಿಸಿ ಮತ್ತು ಮೂಲಭೂತ ಸೌಕರ್ಯ ಮತ್ತು ದೇವಾಲಯದ ಸುತ್ತಮುತ್ತಲಿನ ಆವರಣದ ನಿರ್ವಹಣೆಯ ವಿಶ್ಲೇಷಣೆ ಮಾಡಲು ಉದ್ದೇಶಿಸಲಾಗಿದೆ. ಈ ಯೋಜನೆಯು ಇನ್ನು ಪ್ರಾರಂಭಿಕ ಹಂತದಲ್ಲಿದೆ. ಯೋಜನೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |

ಸಂಖ್ಯೆ: ಕಂಇ 83 ಮುಸಪ್ರ 2022

(ಶಶಿಕಲಾ. ಅ. ಜೊಲ್ಲೆ)
ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ರಾಜ್ಯದಲ್ಲಿರುವ ಧಾರ್ಮಿಕ ದತ್ತಿ ಇಲಾಖೆಯ 'ಎ' ದರ್ಜೆಯ ದೇವಾಲಯಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು "ದೈವ ಸಂಕಲ್ಪ" ಯೋಜನೆಯನ್ನು ಜಾರಿಗೊಳಿಸುವ ಕುರಿತು.

* * *

ಪ್ರಸ್ತಾವನೆ:-

ಭಾರತದ ದೇವಾಲಯಗಳನ್ನು ಮುಖ್ಯವಾಗಿ ಆರಾಧನಾ ಕೇಂದ್ರಗಳನ್ನಾಗಿ ನಿರ್ಮಿಸಲಾಗಿದೆ ಮತ್ತು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಕೇಂದ್ರವಾಗಿಯೂ ಸಹ ಅವು ಕಾರ್ಯನಿರ್ವಹಿಸುತ್ತಿವೆ. ಕಾಲಾಂತರದಲ್ಲಿ ದೇವಾಲಯಗಳ ಪ್ರಾಮುಖ್ಯತೆಯು ಗಣನೀಯವಾಗಿ ಹೆಚ್ಚಾಗುತ್ತಿದೆ. ಇದು ದೇವಾಲಯಕ್ಕೆ ಬರುವ ಭಕ್ತಾದಿಗಳ ಸಂಖ್ಯೆಯ ಹೆಚ್ಚಳದಿಂದ ಖಚಿತವಾಗಿರುತ್ತದೆ. ವಿಶೇಷವಾಗಿ ಕರ್ನಾಟಕದ ಹಲವಾರು ದೇವಾಲಯಗಳು ಸುಂದರ ಪರಿಸರದಲ್ಲಿ ನೆಲೆಗೊಂಡಿರುವ ಸಣ್ಣ ಪಟ್ಟಣಗಳಲ್ಲಿವೆ. ಇಂತಹ ತೀರ್ಥಯಾತ್ರೆಯ ಚಟುವಟಿಕೆಯನ್ನು ಸೃಷ್ಟಿಸಿದ ನೈಸರ್ಗಿಕ ಮತ್ತು ಧಾರ್ಮಿಕ ಪರಿಸರದ ಸ್ಥಳಗಳನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಿ ಭಕ್ತಾಧಿಗಳಿಗೆ ಅತ್ಯುತ್ತಮವಾದ ಸೌಕರ್ಯಗಳನ್ನು ಒದಗಿಸುವುದು ಅಗತ್ಯವಾಗಿದೆ.

ಧಾರ್ಮಿಕ ಮತ್ತು ಪ್ರವಾಸೋದ್ಯಮ ಅನುಭವವನ್ನು ಸಮೃದ್ಧಗೊಳಿಸಲು ಪ್ರಸ್ತುತ ರಾಜ್ಯದಲ್ಲಿರುವ 205 'ಎ' ದರ್ಜೆ ದೇವಾಲಯಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ದೈವ ಸಂಕಲ್ಪ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ದೈವ ಸಂಕಲ್ಪ ಯೋಜನೆಯು ದೇವಾಲಯಗಳಲ್ಲಿ ಯೋಜಿತ ಅಭಿವೃದ್ಧಿ ಕಾರ್ಯಗಳನ್ನು ಹಂತಹಂತವಾಗಿ ಕೈಗೊಳ್ಳುವ ಗುರಿ ಹೊಂದಿದೆ. ಆದ್ದರಿಂದ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 107 ಮುಅಬಿ 2022**

**ಬೆಂಗಳೂರು; ದಿನಾಂಕ: 22ನೇ ಫೆಬ್ರವರಿ, 2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಧಾರ್ಮಿಕ ದತ್ತಿ ಇಲಾಖೆಯ 205 'ಎ' ದರ್ಜೆಯ ದೇವಾಲಯಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು "ದೈವ ಸಂಕಲ್ಪ" ಯೋಜನೆಯನ್ನು ಜಾರಿಗೊಳಿಸಲಾಗುತ್ತಿದ್ದು, ಪ್ರಥಮವಾಗಿ ಅನುಬಂಧದಲ್ಲಿರುವ 25 'ಎ' ದರ್ಜೆಯ ದೇವಾಲಯಗಳಲ್ಲಿ ಯೋಜಿತ ಅಭಿವೃದ್ಧಿ ಕಾರ್ಯಗಳನ್ನು ಹಂತಹಂತವಾಗಿ ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನೊಳಗೊಂಡಂತೆ "ದೈವ ಸಂಕಲ್ಪ" ಯೋಜನೆಯನ್ನು ಜಾರಿಗೊಳಿಸಲು ಆದೇಶಿಸಿದೆ.

ಯೋಜನೆಯ ಗುರಿ:-

1. ಯಾತ್ರಾರ್ಥಿಗಳಿಗೆ ಆಧ್ಯಾತ್ಮಿಕ/ಧಾರ್ಮಿಕ ಅನುಭವವನ್ನು ನೀಡಲು ಆಯ್ದ ದೇವಾಲಯಗಳಲ್ಲಿ ಆಧುನಿಕ ಸೌಕರ್ಯಗಳು ಮತ್ತು ಅನುಕೂಲಗಳನ್ನು ಒದಗಿಸುವುದು.
2. ದೇವಾಲಯಗಳಲ್ಲಿ ಆಚರಿಸಲಾಗುವ ಹಬ್ಬಗಳು, ಶುಭ ಸಂದರ್ಭಗಳು ಮತ್ತು ಭವಿಷ್ಯದ ಬೆಳವಣಿಗೆಯ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಸಮಗ್ರ ಮಾಸ್ಟರ್ ಪ್ಲಾನ್ ತಯಾರಿಸುವ ಮೂಲಕ ಮೂಲಸೌಕರ್ಯವನ್ನು ಬಲಪಡಿಸುವುದು.
3. ಯಾತ್ರಾರ್ಥಿಗಳು/ ಪ್ರವಾಸಿಗರ ಅಗತ್ಯಗಳನ್ನು ಪೂರೈಸಲು ಯೋಜಿತ ಅಭಿವೃದ್ಧಿಯ ಮೂಲಕ ದೇವಾಲಯಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಸುವ್ಯವಸ್ಥಿತಗೊಳಿಸುವುದು
4. ಸೇವಾ ಬುಕಿಂಗ್, ಕೊಠಡಿ ಬುಕಿಂಗ್, ಪಾರ್ಕಿಂಗ್ ಇತ್ಯಾದಿ ಸೇರಿದಂತೆ ದೇವಾಲಯದ ಪ್ರಮುಖ ಚಟುವಟಿಕೆಗಳನ್ನು ಬಲಪಡಿಸಲು ದೇವಾಲಯದ ನಿರ್ವಹಣಾ ಚಟುವಟಿಕೆಗಳಲ್ಲಿ IT ಸಂಯೋಜನೆಯನ್ನು ಒದಗಿಸುವುದು.

....2

5. ದೇವಾಲಯಗಳು ಮತ್ತು ಅದರ ಸೌಲಭ್ಯಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ, ಬಳಕೆಗೆ ಅನುಕೂಲಕರವಾದ ವಾತಾವರಣವನ್ನು ಕಲ್ಪಿಸುವುದು ಮತ್ತು ತ್ಯಾಜ್ಯದ ನಿರ್ವಹಣೆಯನ್ನು ಸಮರ್ಥನೀಯ ರೀತಿಯಲ್ಲಿ ಕನಿಷ್ಠ ಪರಿಸರದ ಪರಿಣಾಮಗಳೊಂದಿಗೆ ಕೈಗೊಳ್ಳುವುದು.
6. ಸೌರಶಕ್ತಿಯನ್ನು ಬಳಸಿಕೊಳ್ಳುವುದು ಸೇರಿದಂತೆ ದೇವಾಲಯದಲ್ಲಿ ಪರಿಸರ ಸುಸ್ಥಿರತೆಯ ದೃಷ್ಟಿಯಿಂದ ಈ ದೇವಾಲಯಗಳನ್ನು ಮಾದರಿ ದೇವಾಲಯಗಳನ್ನಾಗಿ ಮಾರ್ಪಡಿಸುವುದು.

<u>ಯೋಜನೆಯ ತಂತ್ರ:</u>

a) ಮಾಸ್ಟರ್ ಪ್ಲಾನ್ ತಯಾರಿಗಾಗಿ ಕೇಂದ್ರೀಕೃತ ವಿಧಾನವನ್ನು ಅಳವಡಿಸಿ ಪರಿಶೀಲನೆ ಮತ್ತು ತ್ವರಿತವಾಗಿ ಉನ್ನತ ಮಟ್ಟದ ಸರ್ಕಾರದ ಅನುಮೋದನೆಗಳನ್ನು ಒದಗಿಸತಕ್ಕದ್ದು.
b) ದೇವಸ್ಥಾನಗಳಲ್ಲಿ ಲಭ್ಯವಿರುವ ನಿಧಿಯಿಂದ ಯೋಜನೆಯನ್ನು ಕಾರ್ಯಗತಗೊಳಿಸತಕ್ಕದ್ದು.
c) ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳು ಹಾಗೂ ಖಾಸಗಿ ವಲಯದ ಹೂಡಿಕೆಗಳೊಂದಿಗೆ ಸಂಪೂರ್ಣ ಸಮಗ್ರ ರೀತಿಯಲ್ಲಿ ಯೋಜನೆಗಳನ್ನು ಸಿದ್ಧಪಡಿಸುವುದು.
d) ದೇವಾಲಯಗಳಲ್ಲಿ ಅನುಸರಿಸುವ ಆಚರಣೆಗಳು, ಧಾರ್ಮಿಕ ಉದ್ದೇಶಗಳಿಗಾಗಿ ನಿರ್ದಿಷ್ಟವಾಗಿ ಬಳಸಲಾಗುವ ಸೌಲಭ್ಯಗಳ ರಚನೆ/ಆಧುನೀಕರಣಕ್ಕೆ ಒತ್ತು ನೀಡಬೇಕು. ಉದಾ:ಸ್ನಾನಕ್ಕೆ ಸಮರ್ಪಕವಾದ ಸ್ಥಳಗಳು, ಬಟ್ಟೆ ಬದಲಾಯಿಸುವ ಕೊಠಡಿಗಳು, ಶೌಚಾಲಯಗಳು ಇತ್ಯಾದಿಗಳೊಂದಿಗೆ ನದಿ ಘಾಟ್‌ಗಳ ಅಭಿವೃದ್ಧಿ.
e) ಪ್ರವಾಸೋದ್ಯಮದ ಪ್ರಾಮುಖ್ಯತೆಯ ಬಗ್ಗೆ ಸ್ಥಳೀಯ ಸಮುದಾಯಗಳಲ್ಲಿ ಜಾಗೃತಿ ಮೂಡಿಸುವುದು ಮತ್ತು ಅವರ ಆದಾಯದ ಮೂಲಗಳನ್ನು ಸುಧಾರಿಸುವುದು ಮತ್ತು ಒಟ್ಟಾರೆ ದೇವಾಲಯದ ಅಭಿವೃದ್ಧಿಗೊಳಿಸುವುದು.

<u>ದೇವಾಲಯಗಳ ಅಭಿವೃದ್ಧಿ:</u>

**ಹಂತ 1**: <u>- ಮಾಸ್ಟರ್ ಪ್ಲಾನ್‌ಗಳ ತಯಾರಿ:</u>

ದೈವ ಸಂಕಲ್ಪ ಯೋಜನೆಯಡಿ ಆಯ್ಕೆಯಾಗುವ ಎಲ್ಲಾ ದೇವಾಲಯಗಳ ಮಾಸ್ಟರ್ ಪ್ಲಾನ್‌ಗಳನ್ನು ತಯಾರಿಸಲು ಪೂರ್ವ ಅನುಭವ ಹೊಂದಿರುವ ಸೂಕ್ತವಾದ ಏಜೆನ್ಸಿಯನ್ನು ಧಾರ್ಮಿಕ ದತ್ತಿ ಆಯುಕ್ತರು ಟೆಂಡರ್ ಮುಖಾಂತರ ಆಯ್ಕೆ ಮಾಡುವುದು. ಆಯ್ಕೆಯಾದ ಏಜೆನ್ಸಿಯು ದೇವಾಲಯಗಳಲ್ಲಿ ಅಸ್ತಿತ್ವದಲ್ಲಿರುವ ಪರಿಸ್ಥಿತಿ, ಭೂಮಿಯ ಲಭ್ಯತೆ, ಅನುಸರಿಸುತ್ತಿರುವ ಪದ್ಧತಿಗಳು, ದೇವಾಲಯಕ್ಕೆ ಭೇಟಿ ನೀಡುವ ಭಕ್ತಾದಿಗಳ ಸಂಖ್ಯೆ -ಇತ್ಯಾದಿಗಳನ್ನು ಅಧ್ಯಯನ ಮಾಡುವುದು ಮತ್ತು ದೇವಾಲಯದ ಆಡಳಿತದಲ್ಲಿನ ಪ್ರಮುಖ ಅಗತ್ಯತೆಗಳನ್ನು ಅರ್ಥಮಾಡಿಕೊಂಡು, ಸಮಗ್ರ ಮಾಸ್ಟರ್ ಪ್ಲಾನ್‌ನ್ನು ತಯಾರಿಸುವುದು. ಮೊದಲ ಹಂತದಲ್ಲಿ ಆಯ್ಕೆಗೊಂಡ 25 ದೇವಾಲಯಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

<u>ಮಾಸ್ಟರ್ ಪ್ಲಾನ್‌ಗಳ ತಯಾರಿಗಾಗಿ ಮಾರ್ಗಸೂಚಿಗಳು ಕೆಳಕಂಡಂತಿವೆ:</u>

- ಈ ಯೋಜನೆಯಡಿ ದೇವಾಲಯದ ಪದ್ಧತಿ, ಸಂಪ್ರದಾಯ ಮತ್ತು ರೂಢಿಗಳನ್ನು ಹಾಗೂ ಮೂಲ ದೇವಾಲಯದ ಚಟುವಟಿಕೆಗಳನ್ನು ಗಮನದಲ್ಲಿರಿಸಿಕೊಂಡು ಅವುಗಳಿಗೆ ಪ್ರಾಮುಖ್ಯತೆ ನೀಡಲಾಗುವುದು.
- ದೇವಾಲಯದ ಸುತ್ತಮುತ್ತಲಿನ ಜಾಗದಲ್ಲಿ ಭಕ್ತಾದಿಗಳ ಜನಜಂಗುಳಿಯಾಗದಂತೆ ಭಕ್ತಾಧಿಗಳ ಆಗಮನ ಮತ್ತು ನಿರ್ಗಮನ ರೂಪಿಸಲಾಗುವುದು;

- ವಾಹನಗಳ ನಿಲುಗಡೆಗೆ ಅಗತ್ಯವಾದ ಜಾಗವನ್ನು ನಿಗದಿಗೊಳಿಸಿ, ನಿಲುಗಡೆ ಶುಲ್ಕ ವಸೂಲಿ ಮೂಲಕ ವಾಹನ ನಿಲುಗಡೆಗೆ ಸ್ಥಳಾವಕಾಶ ಕಲ್ಪಿಸುವುದು.
- ವಿಶೇಷ ದಿನಗಳಂದು ಜನಜಂಗುಳಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಅವಕಾಶ ಕಲ್ಪಿಸಲಾಗುವುದು;
- ಸುಸಜ್ಜಿತವಾದ ಸ್ನಾನಘಟ್ಟಗಳನ್ನು ನಿರ್ಮಿಸಲಾಗುವುದು;
- ದೇವಾಲಯದ ಅಡಿಗೆ ಮನೆ, ಉಗ್ರಾಣಗಳಿಗೆ ಸುಗಮವಾಗಿ ಹೋಗಿ ಬರಲು ಸೌಲಭ್ಯಗಳನ್ನು ಯೋಜನೆಯಲ್ಲಿ ಅಳವಡಿಸುವುದು.
- ಬೇಡಿಕೆಗೆ ಅನುಗುಣವಾಗಿ ಸಾರ್ವಜನಿಕ ಸೌಕರ್ಯಗಳಾದ ಶೌಚಾಲಯ, ಬಟ್ಟೆ ಬದಲಿಸುವ ಸ್ಥಳ, ಸ್ನಾನದ ಕೊಠಡಿ ಹಾಗೂ ರೆಸ್ಟ್ ರೂಮ್‌ಗಳನ್ನು ಒದಗಿಸುವುದು.
- ಸ್ಥಳೀಯ ಕಟ್ಟಡ ನಿರ್ಮಾಣದ ನಿಬಂಧನೆಗಳನ್ನು ಗಮನಿಸಿ ನಿರ್ಮಾಣ ಕಾರ್ಯಕೈಗೊಳ್ಳುವುದು.
- ತ್ಯಾಜ್ಯವಸ್ತು ನಿರ್ವಹಣೆಗೆ ಸೌಲಭ್ಯಗಳನ್ನು ಕಲ್ಪಿಸುವುದು.

**ಅಳವಡಿಸಲಾದ ಮಾಸ್ಟರ್ ಪ್ಲಾನ್ ಹಾಗೂ ವಿನ್ಯಾಸದ ರೂಪರೇಖೆಗಳ ವಿವರ:**

ಅ) ವಿನ್ಯಾಸವನ್ನು ದೇವಾಲಯದೊಂದಿಗೆ ಚರ್ಚಿಸಿ ತಯಾರಿಸುವುದು.
ಆ) ಸಮಗ್ರ ದೇವಾಲಯದ ಜಾಗದ ಒಟ್ಟು ಸಮೀಕ್ಷಾ ಕಾರ್ಯ.
ಇ) ಜಾಗದ ಮತ್ತು ಸುತ್ತಮುತ್ತಲ ಆವರಣದ ಪೂರ್ವಭಾವಿ ವಿಶ್ಲೇಷಣೆ.
ಈ) ದೇವಾಲಯದ ಸುತ್ತಮುತ್ತಲಿನ ಜಾಗದ ಪ್ರಸಕ್ತ ಮೂಲಭೂತಸೌಕರ್ಯಗಳ ಪರಿಶೀಲನೆ
ಉ)ಅಭಿವೃದ್ಧಿ ಪಡಿಸಲು ಪೂರ್ವಭಾವಿ ತಂತ್ರದ ಸಿದ್ಧತೆ
ಊ) ವ್ಯತ್ಯಾಸಗಳನ್ನು ಗುರುತಿಸಿ, ಈ ಕೆಳಕಂಡಂತೆ ವಿನ್ಯಾಸ ಪ್ರಸ್ತಾವನೆ ಸಿದ್ಧಪಡಿಸಲಾಗುವುದು .

- ವಲಯೀಕರಣ, ಯಾತ್ರಾರ್ಥಿಗಳ ಮತ್ತು ಭೇಟಿ ನೀಡುವವರ ಸಂಚಾರ ಯೋಜನೆಗಳಿಗೆ ತಕ್ಕಂತೆ ಸಂಕೀರ್ಣದ ಒಟ್ಟಾರೆ ಮಾಸ್ಟರ್ ಪ್ಲಾನ್.
- ಅಲಂಕಾರೋದ್ಯಾನ ಹಾಗೂ ತೋಟದ ವಿನ್ಯಾಸದ ನಿವೇಶನದ ನಕ್ಷೆಯನ್ನು ದೇವಾಲಯದ ಪದ್ಧತಿರೂಢಿಗಳಿಗೆ ತಕ್ಕಂತೆ ರೂಪಿಸಿ, ಉದ್ದೇಶಿತ ಅತಿಥಿ ಗೃಹದ ಕಟ್ಟಡ ವಿಭಾಗಗಳು, ಸಮಾರಂಭ ಹಾಲ್, ಉದ್ಯಾನವನ ಪೀಠೋಪಕರಣಗಳನ್ನು ದೇವಾಲಯದ ಚಾರಿತ್ರಿಕ ಮತ್ತು ಮಾಸ್ಟರ್ ಪ್ಲಾನ್‌ನಲ್ಲಿರವ ಉಪಯೋಜನೆಗಳನ್ನು ಅವುಗಳ ಪ್ರಾಮುಖ್ಯತೆತಕ್ಕಂತೆ ಪಟ್ಟಿ ಮಾಡುವುದು.
- ದೇವಾಲಯದ 10 ವರ್ಷಗಳ ಕ್ರಿಯಾಯೋಜನೆ ತಯಾರಿಸಿ, ಅಲ್ಪಾವಧಿ (1-3 ವರ್ಷಗಳು), ಮಧ್ಯಾವಧಿ (4-7 ವರ್ಷಗಳು) ಮತ್ತು ದೀರ್ಘಾವಧಿ (8-10 ವರ್ಷಗಳ) ಕ್ರಿಯಾಯೋಜನೆಗಳನ್ನು ಅಭಿವೃದ್ಧಿಪಡಿಸಿ ಮತ್ತು ಮೂಲಭೂತ ಸೌಕರ್ಯ ಹಾಗೂ ದೇವಾಲಯದ ಸುತ್ತುಮುತ್ತಲಿನ ಆವರಣದ ನಿರ್ವಹಣೆಯ ವಿಶ್ಲೇಷಣೆ ಮಾಡುವುದು.

**ಹಂತ 2**: ಅಂದಾಜು ಪಟ್ಟಿ ತಯಾರಿಕೆ:

ಅಂತಿಮ ಮಾಸ್ಟರ್ ಪ್ಲಾನ್‌ಆಧಾರಿಸಿ, ಸೌಲಭ್ಯ/ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಅಂದಾಜು ವೆಚ್ಚವನ್ನು ಹಂತಹಂತವಾಗಿ ಕಾರ್ಯಗತಗೊಳಿಸಲು ಅನುಕೂಲವಾಗುವಂತೆ ದೇವಾಲಯವು ತಯಾರಿಸಬೇಕು. ಕಟ್ಟಡದ ನಿರ್ಮಾಣಕ್ಕೆ ಸ್ಥಳೀಯವಾಗಿ ದೊರೆಯುವ ಸಾಮಾಗ್ರಿಗಳನ್ನು ಗಮನದಲ್ಲಿರಿಸಿಕೊಂಡು, ದೇವಾಲಯದ ಅಸ್ತಿತ್ವದಲ್ಲಿರುವ ವಾಸ್ತುವಿನ್ಯಾಸಕ್ಕೆ ತಕ್ಕಂತೆ ಅಥವಾ ಕಟ್ಟಡದ ಪ್ರಸ್ತುತ ವಿನ್ಯಾಸಕ್ಕೆ ಅನುಗುಣವಾಗಿ ಅಂದಾಜನ್ನು ತಯಾರಿಸಬೇಕು.

**ಹಂತ 3** : ಕಾಮಗಾರಿಯ ಕಾರ್ಯರೂಪ:

ದೇವಾಲಯದ ಮಾಸ್ಟರ್ ಪ್ಲಾನ್ ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಯೋಜನೆಯ ಅನುಷ್ಠಾನವನ್ನು ಗಮನದಲ್ಲಿರಿಸಿಕೊಂಡು ಮಾಡತಕ್ಕದ್ದು. ದೇವಾಲಯವು ಯೋಜನೆಯನ್ನು ಕಾರ್ಯರೂಪಕ್ಕೆ ತರಲು ತನ್ನ ಸ್ವಂತ ನಿಧಿಯನ್ನು ಉಪಯೋಗಿಸಿಕೊಂಡು ಕಾಮಗಾರಿಯ ನಿರ್ವಹಣೆಗೆ ಸೂಕ್ತ ಏಜೆನ್ಸಿಗೆ ನೀಡಲು ನಿಯಮಾನುಸಾರ ಕ್ರಮಕೈಗೊಳ್ಳತಕ್ಕದ್ದು.

....4

**ಹಂತ 4**. ಅನುಮೋದನೆ ಮತ್ತು ಅನುಷ್ಠಾನ:

ಯೋಜನೆಗಳಿಗೆ/ಅಂದಾಜುಪಟ್ಟಿ ನಕ್ಷೆಗಳಿಗೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆಯತಕ್ಕದ್ದು. ಧಾರ್ಮಿಕ ದತ್ತಿ ಆಯುಕ್ತರು ಈ ಯೋಜನೆಯ ಮೇಲುಸ್ತುವಾರಿಯನ್ನು ನಿರ್ವಹಿಸುವುದು. ಪ್ರತಿ ಹದಿನೈದು ದಿನಗಳಿಗೊಮ್ಮೆ ಯೋಜನೆಯ ಪ್ರಗತಿ ಪರಿಶೀಲನಾ ಕಾರ್ಯನಿರ್ವಹಿಸುವುದು.

ಒಂದು ಬಾರಿ ಮಾಸ್ಟರ್ ಪ್ಲಾನ್ ಅನುಮೋದನೆಗೊಂಡ ನಂತರ, ದೇವಾಲಯವು ಯೋಜನೆಯನ್ನು ಹಂತಹಂತವಾಗಿ ನಿರ್ದಿಷ್ಟಪಡಿಸಿದಂತೆ ಅನುಷ್ಠಾನಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

M.L. Varalakshmi
(ಎಂ.ಎಲ್.ವರಲಕ್ಷ್ಮಿ) 29/9/23
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಧಾರ್ಮಿಕ ದತ್ತಿ ಇಲಾಖೆ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್.ಎಸ್.ಎ.)ರವರ ಕಾರ್ಯದರ್ಶಿ, ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಇ & ಆರ್.ಎಸ್.ಎ.)ರವರ ಕಾರ್ಯದರ್ಶಿ, ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ' ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು, (ಎ&ಇ)ರವರ ಕಾರ್ಯದರ್ಶಿ, ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು.
4. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.
5. ಎಲ್ಲಾ ಜಿಲ್ಲಾಧಿಕಾರಿಗಳು (ಧಾರ್ಮಿಕ ದತ್ತಿ ಆಯುಕ್ತರ ಮುಖಾಂತರ)
6. ಸಂಬಂಧಪಟ್ಟ ದೇವಾಲಯಗಳ ಕಾರ್ಯನಿರ್ವಹಣಾಧಿಕಾರಿಗಳು(ಧಾರ್ಮಿಕ ದತ್ತಿ ಆಯುಕ್ತರ ಮುಖಾಂತರ)

**ಪ್ರತಿ:-**

1. ಧಾರ್ಮಿಕ ದತ್ತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಉಪ ಕಾರ್ಯದರ್ಶಿ,(ಪ್ರ) ಕಂದಾಯ ಇಲಾಖೆ (ಭೂಮಿ, ಯು.ಪಿ.ಓ.ಆರ್. & ಧಾರ್ಮಿಕ ದತ್ತಿ) ಇವರ ಆಪ್ತ ಸಹಾಯಕರು.
4. ರಕ್ಷಾ ಕಡತ / ಹೆಚ್ಚುವರಿ ಪ್ರತಿ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 107 ಮುಅಬಿ 2022,**
**ಬೆಂಗಳೂರು; ದಿನಾಂಕ: 22ನೇ ಫೆಬ್ರುವರಿ, 2022**

**ಅನುಬಂಧ**

1) ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಾಲಯ, ಮಹದೇಶ್ವರ ಬೆಟ್ಟ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.
2) ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಾಲಯ, ಸುಬ್ರಹ್ಮಣ್ಯ, ಕಡಬ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು.
3) ಶ್ರೀ ಕೊಲ್ಲೂರು ಮೂಕಾಂಬಿಕಾ ದೇವಾಲಯ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.
4) ಶ್ರೀ ಚಾಮುಂಡೇಶ್ವರಿ ದೇವಾಲಯ ಮತ್ತು ಅರಮನೆ ಮುಜರಾಯಿ ದೇವಾಲಯಳು, ಮೈಸೂರು ಜಿಲ್ಲೆ.
5) ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.
6) ಶ್ರೀ ದುರ್ಗಾಪರಮೇಶ್ವರಿ ದೇವಾಲಯ, ಮಂದಾರ್ತಿ, ಬ್ರಹ್ಮಾವರ ತಾಲ್ಲೂಕು, ಉಡುಪಿ ಜಿಲ್ಲೆ.
7) ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ, ಎಸ್.ಎಸ್.ಘಾಟಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
8) ಶ್ರೀ ಬನಶಂಕರಿ ದೇವಾಲಯ, ಎಸ್.ಕರಿಯಪ್ಪರಸ್ತೆ, ಬೆಂಗಳೂರು ನಗರ ಜಿಲ್ಲೆ.
9) ಶ್ರೀ ಸಿದ್ದಲಿಂಗೇಶ್ವರಸ್ವಾಮಿ ದೇವಾಲಯ, ಎಡಿಯೂರು, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.
10) ಶ್ರೀ ರೇಣುಕಾ ಯಲ್ಲಮ್ಮ ದೇವಾಲಯ, ಯಲ್ಲಮ್ಮಗುಡ್ಡ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ.
11) ಶ್ರೀ ಬ್ರಹ್ಮಲಿಂಗೇಶ್ವರ ದೇವಾಲಯ, ಮಾರನಕಟ್ಟೆ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.
12) ಶ್ರೀ ಸೌತಡ್ಕ ಮಹಾಗಣಪತಿ ದೇವಾಲಯ, ಕೊಕ್ಕಡ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
13) ಶ್ರೀ ಹುಲಿಗಮ್ಮ ದೇವಾಲಯ, ಹುಲಿಗಿ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ.
14) ಶ್ರೀ ಬ್ರಾಹ್ಮಿ ದುರ್ಗಾಪರಮೇಶ್ವರಿ ದೇವಾಲಯ, ಕಮಲಶಿಲೆ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.
15) ಶ್ರೀ ನಿಮಿಷಾಂಬ ದೇವಾಲಯ, ಗಂಜಾಂ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.
16) ಶ್ರೀ ಮಂಜುನಾಥಸ್ವಾಮಿ ದೇವಾಲಯ, ಕದ್ರಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
17) ಶ್ರೀ ಮಿಂಟೋ ಆಂಜನೇಯಸ್ವಾಮಿ ದೇವಾಲಯ, ಚಾಮರಾಜಪೇಟೆ, ಟಿಪ್ಪುಸುಲ್ತಾನ್ ರಸ್ತೆ, ಬೆಂಗಳೂರು ನಗರ ಜಿಲ್ಲೆ.
18) ಶ್ರೀ ಜನಾರ್ಧನಾ ಮತ್ತು ಮಹಾಕಾಳಿ ದೇವಾಲಯ, ಅಲಂಬವಾಡಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ.
19) ಶ್ರೀ ಕಬ್ಬಾಳಮ್ಮ ದೇವಾಲಯ, ಕಬ್ಬಾಳು, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
20) ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ, ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.
21) ಶ್ರೀ ರಂಗನಾಥಸ್ವಾಮಿ ದೇವಾಲಯ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.
22) ಶ್ರೀ ದೊಡ್ಡಗಣಪತಿ ಮತ್ತು ಶ್ರೀ ಮಲ್ಲಿಕಾರ್ಜುನ ದೇವಾಲಯಗಳು, ಬಸವನಗುಡಿ, ಬೆಂಗಳೂರು ನಗರ ಜಿಲ್ಲೆ.
23) ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯ, ಮೇಲುಕೋಟೆ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.
24) ಶ್ರೀ ಮಹಾಲಿಂಗೇಶ್ವರ ದೇವಾಲಯ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ.
25) ಶ್ರೀ ಚನ್ನಕೇಶವಸ್ವಾಮಿ ದೇವಾಲಯ, ಬೇಲೂರು, ಹಾಸನ ಜಿಲ್ಲೆ.

H.L. Varalakshmi 22/2/22
(ಎಂ.ಎಲ್.ವರಲಕ್ಷ್ಮೀ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಧಾರ್ಮಿಕ ದತ್ತಿ ಇಲಾಖೆ)